# ಹಣ್ಣು ಬಂದಿದೆ ಕೊಳ್ಳಿರೋ ನೀವೀಗ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The lyrics given in Ref. 2 above are similar to that of the singer. They are given in yellow highlights. The lyrics in Ref. 3 are almost similar to Ref. 2. But lyrics are fully different in Ref. 1. They are given separately in green highlights.

ರಾಗ ಬಿಲಹರಿ ತಾಳ ಅಟ್ಟ

ಹಣ್ಣು ಬಂದಿದೆ ಕೊಳ್ಳಿರೋ ನೀವೀಗ
ಚಿನ್ನ ಬಾಲಕೃಷ್ಣನೆಂಬೊ ಚೆನ್ನಾದ ಬಾಳೆಯ ಹಣ್ಣು || ಪ ||

ಹವ್ಯ ಕವ್ಯದ ಹಣ್ಣು, ಸವಿವ ಸಕ್ಕರೆ ಹಣ್ಣು
ಭವ ರೋಗಗಳನೆಲ್ಲ ಕಳೆವ ಹಣ್ಣು
ನವನೀತ ಚೋರನೆಂಬೊ ಜವನ ಅಂಜಿಪ ಹಣ್ಣು
ಅವನಿಯೊಳು ಶ್ರೀ ರಾಮನೆಂಬೊ ಹಣ್ಣು || 1 ||

ಕೊಳೆತು ಹೋಗುವುದಲ್ಲ, ಹುಳಿತು ಹೋಗುವುದಲ್ಲ
ಕಳೆದು ಬಿಸಾಡಿಸಿ ಕೊಳ್ಳುವುದಲ್ಲ
ಅಳತೆ ಕೊಂಬುವುದಲ್ಲ ಗಿಳಿ ಕಚ್ಚಿ ತಿಂಬೋದಲ್ಲ
ಒಳಿತಾದ ಹರಿಯೆಂಬೊ ಮಾವಿನ ಹಣ್ಣು || 2 ||

ಕೆಟ್ಟು ನಾರುವುದಲ್ಲ ಬಿತ್ತಿ ಬೆಳೆಯೋದಲ್ಲ
ಕಷ್ಟದಿ ಹಣ ಕೊಟ್ಟು ಕೊಂಬುವುದಲ್ಲ

ಸೃಷ್ಟಿಯೊಳಗೆ ನಮ್ಮ ಪುರಂದರ ವಿಠಲ
ಕೃಷ್ಣ ರಾಯನೆಂಬೊ ಶ್ರೇಷ್ಠವಾದ ಹಣ್ಣು || 3 ||

**Note:** The below mentioned lyrics are as per the book in Ref. 1 above, in green highlights.

ರಾಗ ಬಿಲಹರಿ ತಾಳ ಅಟ್ಟ

ಹಣ್ಣು ಬಂದಿದೆ ಕೊಳ್ಳಿರೋ ---- ಹರಿದಾಸರು
ಹಣ್ಣು ಬಂದಿದೆ ಕೊಳ್ಳಿರೋ || ಪ ||

ಚಿನ್ನ ಬಾಲಕೃಷ್ಣನೆಂಬೊ
ಚೆನ್ನಾದ ಬಾಳೆಯ || ಅಪ ||

ಕೊಳೆತು ಹೋಗುವುದಲ್ಲ, ಹುಳಿತು ನಾರುವುದಲ್ಲ
ಕಳೆದು ಬಿಸಾಡಿಸಿ ಕೊಳ್ಳುವುದಲ್ಲ
ಅಳತೆ ಗೊಂಬುದಲ್ಲ ಗಿಳಿ ಕಚ್ಚಿ ತಿಂಬುದಲ್ಲ
ಒಳಿತಾದ ಶ್ರೀ ಹರಿ ಎಂಬ ಮಾವಿನ ಹಣ್ಣು || 1 ||

ಅಜನ ಪಡೆದ ಹಣ್ಣು ಗಜವ ಸಲಹಿದ ಹಣ್ಣು
ತ್ರಿ ಜಗದಿ ಮುನಿಗಳಿಗೆ ತೋರಿದ ಹಣ್ಣು
ತ್ರಿ ಜಗವಂದಿತ ಪಾದವೆಂಬ ಮಾವಿನ ಹಣ್ಣು
ಸುಜನಾನಂದಿಯರು ನೀವ್ ಕೊಳಬನ್ನಿರಮ್ಮ || 2 ||

ತರುವ ಕಾಯ್ವ ಹಣ್ಣು, ಉರಗನ ತುಳಿದ ಹಣ್ಣು
ಕರೆದರೆ ಕಂಬದಿಂದ ಬಂದ ಹಣ್ಣು
ಮರುಗುವ ಧ್ರುವನ ಉನ್ನತನ ಮಾಡಿದ ಹಣ್ಣು
ಪುರಂದರ ವಿಠಲನೆಂಬ ಹಣ್ಣ ಕೊಳಬನ್ನಿ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಹಾಡಿನಲ್ಲಿ ದಾಸರು ಹಣ್ಣಿನ ಮಾರಾಟಗಾರರಾಗಿದ್ದಾರೆ. ಅವರು ಮಾರುವ ಹಣ್ಣೆಂದರೆ ಶ್ರೀ ಹರಿಯ ವಿವಿಧ ನಾಮದ ಹಣ್ಣುಗಳು.

**ಹವ್ಯ ಕವ್ಯ** – ಹೋಮ, ಹವನ ಮೊದಲಾದ ಧಾರ್ಮಿಕ ಕ್ರಿಯೆಗಳಿಗೆ ಅನುಕೂಲವಾಗುವ.

**ಅಳತೆಗೊಳ್ಳು** = ಅಳತೆಗೆ ಒಳಗಾಗು

**ಗಜ** = ಪಾಂಡ್ಯ ದೇಶದ ಅರಸು, ಇಂದ್ರದ್ಯುಮ್ನ. ಇವನು ಮಹಾ ವಿಷ್ಣು ಭಕ್ತ. ಅಗಸ್ತ್ಯ ಋಷಿಯ ಶಾಪದಿಂದ ಗಾಜನಾಗಿ ಹುಟ್ಟಿ ಮೊಸಳೆಯ ಬಾಯಿಗೆ ಸಿಕ್ಕು ಪರಮಾತ್ಮನ ಕೃಪೆಯಿಂದ ಪಾರಾದನು. ಈ ಗಜರಾಜನನ್ನು ಹಿಡಿದ ಮೊಸಳೆ ಹೂ ಹೂ ಎಂಬ ಶಾಪಗ್ರಸ್ತ ಗಂಧರ್ವ.

**ಸುಜನ** = ಕುಲೀನ

**ಆನಂದಿ** = ನಗೆಮೊಗದವರು

**ತುರು** = ಆಕಳು, ಹಸು

**ಉರಗ** = ಕಾಳಿಂಗ. ಇವನಿಗೆ ಕಾಲಿಯನೆಂಬ ಹೆಸರಿದೆ. ಈತನು ಕದ್ರು - ಕಶ್ಯಪರ ಮಗ. ಸರ್ಪ ಕುಲದವ. ಗರುಡನ ಭಯದಿಂದ ಕಾಲಿಯ (ಯಮುನ) ಮಡುವಿನಲ್ಲಿ ಅಡಗಿದ್ದ. ಇವನ ವಿಷದಿಂದ ಗೋಕುಲದ ಗೋವಳರಿಗೆಲ್ಲ ತೊಂದರೆಯಾಗಲು ಶ್ರೀ ಕೃಷ್ಣನು ಹಿಂಸಿಸಿ ರಮಣಕ ದ್ವೀಪಕ್ಕೆ ಕಳುಹಿಸಿದನು.

**ಧ್ರುವ** = ಉತ್ತಾನಪಾದ - ಸುನೀತಿಯರ ಮಗ. ಮಲತಾಯಿಯಾದ ಸುರುಚಿಯ ಮತ್ಸರಕ್ಕೆ ಬೇಸತ್ತು ಸ್ಥಿರವಾದ ಸ್ಥಾನವನ್ನು ದೇವರಿಂದ ಪಡೆದುಕೊಳ್ಳಬೇಕೆಂದು ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಅವನಿಗೆ ಧ್ರುವಪದವಿಯನ್ನು ಕೊಟ್ಟನು.

**Classification:** Mundige
**Ankita:** purandara vittala
**Location:** NA
**Category:** Vishnu Stuti, Krishna Stuti
**Sub-Category:** Vishnu, Krishna, bhava, roga, benne, uraga, bhumi, rama, gili, rokka, Dhruva, gaja, brahma, hannu, rama, gaja, yama, brahma, Dhruva, muni
**Pravachana:** NA
**Explanation:** NA